ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಕೆ.ಜಿ.ಎಫ್.

**ಸಿಸಿ ಸಂಖ್ಯೆ: 3583/2025**

**ಪಿರ್ಯಾದಿದಾರರು:** ರಾಜ್ಯಪರ ಪೊಲೀಸರು,
ರಾಬರ್ಟ್‌ಸನ್‌ಪೇಟೆ ಪೊಲೀಸ್ ಠಾಣೆ.

**ವಿರುದ್ಧ**

ಆರೋಪಿತರು:
1) ಲಿಖಿತ್ ಎನ್. @ ಮನೋಜ್ ಬಿನ್ ನವೀನ್ ಎ.
21 ವರ್ಷ, ಇ.ಟಿ. ಬ್ಲಾಕ್, ಫೈಪ್ ಲೈನ್,
ಊರಿಗಾಂ ಪೋಸ್ಟ್, ಕೆ.ಜಿ.ಎಫ್.
2) ಅರಮನ್ ಬಾಷಾ ಬಿನ್ ಅಸ್ಲಮ್ ಬಾಷಾ,
19 ವರ್ಷ, ವಾಸ:#620, 5 ನೇ ಕ್ರಾಸ್,
ಬೌರಿಲಾಲ್ ಪೇಟೆ, ರಾಬರ್ಟ್ಸನ್ ಪೇಟೆ
ಪೋಸ್ಟ್, ಕೆ.ಜಿ.ಎಫ್.

**ದೋಷಾರೋಪಣೆ**

ಶ್ರೀಮತಿ ಎನ್.ಬಿ. ಜಯಲಕ್ಷ್ಮೀ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕೆ.ಜಿ.ಎಫ್ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 25.10.2025 ರಂದು ಬೆಳಿಗ್ಗೆ 10.00 ಗಂಟೆಯಲ್ಲಿ ಯಾವುದೋ ವಿಚಾರಕ್ಕೆ ದೋ.ಸಾ.2 ರಿಂದ 4 ಹಾಗೂ ಆರೋಪಿ2 ನಿಮಗೆ ಜಗಳವಾಗಿದ್ದು, ಅಲ್ಲಿನ ಜನರು ಅವರಿಗೆ ಸಮಾದಾನ ಮಾಡಿ ಕಳುಹಿಸಿದ್ದು, ನಂತರ ಆ ದಿನ ಸಂಜೆ 4.00 ಗಂಟೆಯಲ್ಲಿ ಆರೋಪಿ2 ನೀವು ಆರೋಪಿ1 ನಿಮ್ಮನ್ನು ಕರೆಸಿ ದೋ.ಸಾ.2 ರವರ ಮನೆಯ ಬಳಿ ಗಲಾಟೆ ಮಾಡಿದಾಗ ದೋ.ಸಾ.1 ರವರು ಇಲ್ಲಿ ಯಾಕೆ ಬಂದು ಗಲಾಟೆ ಮಾಡುತ್ತೀಯಾ ಎಂದು ಬುದ್ದಿವಾದ ಹೇಳಿ ಕಳುಹಿಸಿದ್ದು, ದಿನಾಂಕ:06.11.2025 ರಂದು ರಾತ್ರಿ ಸುಮಾರು 10.45 ಗಂಟೆಯಲ್ಲಿ ದೋ.ಸಾ.1 ರವರು ಹಾಲು ತೆಗೆದುಕೊಂಡು ಬರಲು ತಮ್ಮ ಏರಿಯಾದಲ್ಲಿರುವ ರಾಯಲ್ ಸ್ಟೋರ್ ಅಂಗಡಿಯ

ಬಳಿಗೆ ಬಂದಾಗ ಅಂಗಡಿಯ ಬಳಿ ಇದ್ದ ಆರೋಪಿ2 ನೀವು ದೋ.ಸಾ.1 ರವರನ್ನು ಕುರಿತು ಯಾಕಣ್ಣಾ ಆ ದಿನ ನೀನು ಆ ರೀತಿ ಮಾತನಾಡಿದೆ ನಾವು ಏನಂತ ನಿನಗೆ ಗೊತ್ತಿಲ್ಲ, ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ನಾವು ಏನಂತ ನಿನಗೆ ತೋರಿಸುತ್ತೇವೆ ಎಂದು ಬೆದರಿಕೆ ಹಾಕಿದ್ದು, ದೋ.ಸಾ.1 ರವರು ದೋ.ಸಾ.5 ರವರನ್ನು ಕರೆದುಕೊಂಡು ದ್ವಿಚಕ್ರ ವಾಹನದಲ್ಲಿ 2 ನೇ ಕ್ರಾಸ್‌ನಲ್ಲಿರುವ ಮೊಯಿದು ಪ್ಯಾಲೇಸ್ ಮುಂಭಾಗದ ರಸ್ತೆಯಲ್ಲಿ ರಾತ್ರಿ 10.50 ಗಂಟೆಗೆ ಬರುತ್ತಿದ್ದಾಗ ಅಲ್ಲಿದ್ದ ಆರೋಪಿ1 ಮತ್ತು 2 ನೀವು ದೋ.ಸಾ.1 ರವರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿ, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂಃ126(2) ಸಹವಾಚಕ ಕಲಂಃ3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

2) ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, ಆರೋಪಿ1 ನೀವು "ಯಾಕೋ ಲೋಫರ್ ನನ್ನ ಮಗನೆ ನಿನ್ನದು ಗಾಂಚಲಿ ಜಾಸ್ತಿಯಾಯಿತು, ನಿನ್ನನ್ನು ಏನು ಮಾಡುತ್ತೇವೆ ನೋಡು" ಎಂದು ಅವಾಚ್ಯ ಶಬ್ಧಗಳಿಂದ ಬೈದು, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂಃ352 ಸಹವಾಚಕ ಕಲಂಃ3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

3) ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, ಆರೋಪಿ1 ನೀವು ಒಂದು ಚಾಕುವಿನಿಂದ ದೋ.ಸಾ.1 ರವರ ಎಡಗೈ ಮೇಲೆ ಹೊಡೆದು ರಕ್ತಗಾಯಪಡಿಸಿ ಅದೇ ಕತ್ತಿಯನ್ನು ತಿರುಗಿಸಿಕೊಂಡು ಎಡ ಹೊಟ್ಟೆಯ ಬಳಿ ಹೊಡೆದು ತರಚಿದ ರಕ್ತಗಾಯಪಡಿಸಿ, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂಃ118(1) ಸಹವಾಚಕ ಕಲಂಃ3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

4) ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, ದೋ.ಸಾ.1 ರವರನ್ನು ಕೈಗಳಿಂದ ಹೊಡೆದು ಮೈ ಕೈ ನೋವುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ

ಸಂಹಿತೆ ಕಲಂಃ115(2) ಸಹವಾಚಕ ಕಲಂಃ3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

5) ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, "ಮತ್ತೊಮ್ಮೆ ನೀನು ಗಾಂಚಲಿ ಮಾಡಿದರೆ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ" ಎಂದು ಪ್ರಾಣ ಬೆದರಿಕೆ ಹಾಕಿ, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂಃ351(2)(3) ಸಹವಾಚಕ ಕಲಂಃ3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಸದರಿ ಆರೋಪಕ್ಕೆ ಆರೋಪಿಗಳಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 15.04.2026.

(ಎನ್.ಬಿ. ಜಯಲಕ್ಷ್ಮೀ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕೆ.ಜಿ.ಎಫ್.